ತಾಲ್ಲೂಕು.	ಹೋಬಳಿ.	ಗ್ರಾಮದ.	ಸ್ವತ್ತಿನ ವಿವರ. ಜಮೀನ್. ಸರ್ವೆ ನಂಬರು.	ಖಾಬು ಖುಷ್ಕಿ, ತರಿ, ಬಾಗಾಯತು ಅ ಪೈಕಿ.	ವಿಸ್ತೀರ್ಣ.	ಅಕಾರ.	ಮರಗಳು ಭೂವಿಗಳು ಮಗ್ಗೈರ. ಕೊಡಿಪ ಮುಪ್ಪಿಗೂ ಪರಿಹಾರ್ಯಾ ತಪ್ಪಿಲ್ಲಿ.	ಹರಾಜು ಸ್ಥಳ, ತಾರೀಖು ಮತ್ತು ಕಾಲ.	ಹರಾಜು ನಡಿಸಲಕ್ಕವರ ಹೆಸರು.	ಕುಟ್ಟವಾಗಿದ್ದಲ್ಲಿ ಸರ್ಕಾರದ ಸವಾಲ್ ವೊಬಲಗು ಮತ್ತು ಇತರ ಪರಾ.
1	2	3	4	5	6	7	8	9	10	11
ಶ್ರೀರಂಗಪಟ್ಟಣ.	ಕಿಕ್ಕೆರಿ	ಗುಂಡೆಹೊಸಹಳ್ಳಿ ಗ್ರಾಮದ	235	ತರೀ ಜಮೀನ್	0—20	0— 4—0		ಜಮೀನ್‌ಗಳ ಬಗ್ಗೆ 1896ನೇ ಇಸವಿ ಅಕ್ಟೋಬರ್ 27ನೇ ದಿನ 11ಘಂಟೆ.	ಶ್ರೀರಂಗಪಟ್ಟಣ ತಾಲ್ಲೂಕು ಅಮಲ್‌ದಾರ್ರು ಅಥವಾ ಫೈಂಡ್‌ರಾಕ್ಕ ಸಬ್ ಡಿವಿಜ್ ಆಫಿಸರವರು.	
			240		1—14	7— 8—0				
			80		1—34	9— 8—0				
			212		2— 2	12— 0—0				
			213		2— 0	11— 0—0				
			214		2— 3	12— 0—0				
			215		2— 2	11— 0—0				
			216		2—14	13— 0—0				
			217		1—37	10— 0—0				
			257		0—25	1— 4—0				
			78		1— 4	6— 8—0				
			259		0—10	0— 4—0				
			261		1—21	8— 0—0				
			262		2— 1	11— 0—0				
			199		1—37	7— 0—0				
			211		1—28	0—12—0				
			128		0—12	1—12—0				
			17		25—24	122—12—0				

ಬಿ. ಪಂಚನಾಥರಾವ್,
ಸಬ್ ಡಿವಿಜ್ ಆಫಿಸರ್.

ನಗರ ಡಿವಿಜ್ ಡಿಸ್ಟ್ರಿಕ್ಟ್ ಜಡ್ಜ್‌ಯವರ ಕೋರ್ಟ್‌ನಲ್ಲಿ.

ಸ॥ 1896—97ನೇ ಇಸವಿ ವಿ॥ ಅರ್ಜೀ ನಂಬರ್ 34.

ಮೃತಪಟ್ಟ ಅಜ್ಜಂಪುರದ ಮಹಮ್ಮದ್ ಮಸ್ತ್ಕಾನ್‌ಸಾಬರ ಆಸ್ತೀ ವಿಷಯದಲ್ಲಿ—

ಅರ್ಜೀದಾರಳು ಯಿಮಾಂಬಿ, ಮೃಪಟ್ಟ ಸದರೀ ಅಜ್ಜಂಪುರದ ಮಹಮ್ಮದ್‌ಮಸ್ತ್ಕಾನ್‌ಸಾಬರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಚಿಕ್ಕಮಗಳೂರು ತಾಲ್ಲೂಕು ತಳವಾಸೆ ಮಾಗಣೆ ಶಿರವಾಸಿ ಗ್ರಾಮ ಸ್ಥಳದ ಅರ್ಜಿದಾರಳು ಯಿಮಾಂಬಿಯು, ಚಿಕ್ಕಮಗಳೂರು ತಾಲ್ಲೂಕು ತಳವಾಸೆ ಮಾಗಣೆ ಶಿರವಾಸಿಗ್ರಾಮದ ವಾಸಸ್ಥರಾಗಿ ಚಿಕ್ಕಮುಗಳೂರು ಕಸಬಾದಲ್ಲಿ ಮೃತಪಟ್ಟ ಮಹಮ್ಮದ್ ಮಸ್ತ್ಕಾನ್‌ಸಾಬರ ಜಿಂದಗಿ ಬಗ್ಯಾಗಿ ಬರತಕ್ಕ 700 ರೂಪಾಯಿ ಸಾಲವನ್ನು ವಸೂಲ್‌ಮಾಡುವದಕ್ಕೆ ಸ॥ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರಳಾದ ಯಿಮಾಂಬೀ ಯಂಬವಳ ಅರ್ಜಿಯನ್ನು ಸ॥ 1896ನೇ ಇಸವಿ ಸೆಪ್ಟೆಂಬರ್ ತಿಂಗಳ ತಾರೀಖು 18ರಲ್ಲು ಈ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅಜ್ಜಂಪುರದ ಮಹಮ್ಮದ್ ಮಸ್ತ್ಕಾನ್‌ಸಾಬರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ॥ 1896ನೇ ಇಸವಿ ಆಗಸ್ಟ್ ತಿಂಗಳ 18ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಬಿ. ತಿರುಮಲಾಚಾರ್,
ಡಿಸ್ಟ್ರಿಕ್ಟ್ ಜಡ್ಜ್.